ಅ) ಭೂಮಿ ಯೋಜನೆಯಡಿಯಲ್ಲಿ ಪ್ರತಿ ವರ್ಷ ರೈತರ ಮನೆ ಬಾಗಿಲಿಗೆ ಒಂದು ಗಣಕೀಕೃತ ಪಹಣಿ ಪತ್ರವನ್ನು ಉಚಿತವಾಗಿ ತಲುಪಿಸಲಾಗುವುದು. ರೈತರಿಗೆ ಹೆಚ್ಚುವರಿ ಪ್ರತಿ ಬೇಕಾಗಿದ್ದಲ್ಲಿ ಮಾತ್ರ ಅವರು 15 ರೂ. ಗಳನ್ನು ಸಂದಾಯಿಸಿ ಪ್ರತಿಯನ್ನು ಪಡೆದುಕೊಳ್ಳಬಹುದಾಗಿದೆ.

ಆ) ಇಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಈ) ಹೌದು.

ಉ) ಈ ಆರ್ಥಿಕ ವರ್ಷದ ಅಂತ್ಯದೊಳಗಾಗಿ ಮೊದಲ ಹಂತದಲ್ಲಿ 100 ಹೋಬಳಿ ಕೇಂದ್ರಗಳಲ್ಲಿ ಸಾರ್ವಜನಿಕ ಭಾಗವಹಿಸುವಿಕೆಯೊಂದಿಗೆ ಭೂಮಿ ಕೇಂದ್ರಗಳನ್ನು ಸ್ಥಾಪಿಸಲು ಯೋಜಿಸಲಾಗಿದೆ.

ಹಿಂದೂ ದೇವಾಲಯಗಳ ಜೀರ್ಣೋದ್ಧಾರಕ್ಕಾಗಿ ಮೀಸಲಿರಿಸಿದ ಹಣ

233 (602) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ) ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯ ಸರ್ಕಾರ ವರ್ಷದಲ್ಲಿ ಹಿಂದೂ ದೇವಾಲಯಗಳ ಜೀರ್ಣೋದ್ಧಾರಕ್ಕೆ ಎಷ್ಟು ಹಣ ಮೀಸಲಿರಿಸಲಾಗಿದೆ?

ಆ) ಈ ಹಣವನ್ನು ಎಲ್ಲಾ ಕ್ಷೇತ್ರಗಳಿಗೆ ಯಾವ ರೀತಿ ಹಂಚಲಾಗುವುದು?

ಇ) ಎಲ್ಲಾ ಅರ್ಜಿಗಳಿಗೆ ಹಣ ನೀಡಲಾಗುವುದೇ?

ಈ) ಸರ್ಕಾರ ವರ್ಷಕ್ಕೆ ನೀಡಲಾದ ಹಣ ದೇವಸ್ಥಾನದ ರಿಪೇರಿಗೆ ಸಾಕಾಗಬಹುದೇ?

ಉ) ಇಲ್ಲದಿದ್ದಲ್ಲಿ ಈ ವರ್ಷದಿಂದ ಹೆಚ್ಚಿಗೆ ಮಾಡಲಾಗುವುದೇ?

ಶ್ರೀಮತಿ ಸುಮಾ ವಸಂತ (ಮುಜರಾಯಿ ರಾಜ್ಯ ಸಚಿವರು):

ಅ) ರಾಜ್ಯ ಸರ್ಕಾರವು 2002-03ನೇ ಸಾಲಿನಲ್ಲಿ ಮೀಸಲಿರಿಸಿದ ಅನುದಾನದ ವಿವರ ಈ ಕೆಳಕಂಡಂತಿದೆ. ಜೀರ್ಣೋದ್ಧಾರಕ್ಕೆ-ರೂ. 300-00 ಲಕ್ಷಗಳು

ಆರಾಧನಾ ಯೋಜನೆ ಅಡಿ ರೂ. 400.00 ಲಕ್ಷಗಳು

ಆರಾಧನಾ ಯೋಜನೆಯಡಿ ಇತರೇ ಧರ್ಮಗಳ ಪೂಜಾ ಸ್ಥಳಗಳಿಗೂ ಸೇರಿ ಹಣ ಬಿಡುಗಡೆ ಮಾಡಲಾಗುತ್ತಿದೆ.

ಆ) ಜೀರ್ಣೋದ್ಧಾರಕ್ಕಾಗಿ ದೇವಸ್ಥಾನವಾರು ಹಣ ಬಿಡುಗಡೆ ಮಾಡಲಾಗುವುದು. ವಿಧಾನ ಸಭಾ ಕ್ಷೇತ್ರವಾರು ಬಿಡುಗಡೆ ಮಾಡಲಾಗುವುದಿಲ್ಲ. ಆದರೆ ಆರಾಧನಾ ಯೋಜನೆಯಡಿಯಲ್ಲಿ ಕ್ಷೇತ್ರವಾರು ಹಣ ಬಿಡುಗಡೆ ಮಾಡಲಾಗುತ್ತದೆ.

ಇ) ಅನುದಾನವನ್ನು ಅವಶ್ಯಕತೆ ಹಾಗೂ ಹಣದ ಲಭ್ಯತೆಯ ಆಧಾರದ ಮೇಲೆ ಬಿಡುಗಡೆ ಮಾಡಲಾಗುವುದು.

ಈ) ಇಲ್ಲ.

ಉ) ಇನ್ನು ಹೆಚ್ಚಿನ ಅನುದಾನಕ್ಕಾಗಿ ಆರ್ಥಿಕ ಇಲಾಖೆಗೆ ಬೇಡಿಕೆ ಸಲ್ಲಿಸಲಾಗುವುದು.

ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಮರು ಸರ್ವೇಕ್ಷಣೆ (ರೀಸರ್ವೆ) ನಡೆಸುವುದು

234 (603) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ ಕ್ಷೇತ್ರ) ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಮರು ಸರ್ವೆ (ರೀ ಸರ್ವೆ) ನಡೆಸುವ ಕುರಿತಂತೆ ಕ್ರಿಯಾ ಯೋಜನೆ ಸಲ್ಲಿಸುವಂತಹ ಕೇಂದ್ರ ಸರ್ಕಾರ ರಾಜ್ಯಕ್ಕೆ ಸೂಚಿಸುವುದು ನಿಜವೇ?

ಆ) ರಾಜ್ಯ ಸರ್ಕಾರ ಕ್ರೀಯಾ ಯೋಜನೆ ಸಲ್ಲಿಸಿದೆಯೇ, ಹಾಗಿದ್ದಲ್ಲಿ ಎಂದು ಸಲ್ಲಿಸಲಾಗಿದೆ?

ಇ) ಸಲ್ಲಿಸಲಾಗಿರುವ ಕ್ರಿಯಾ ಯೋಜನೆ, ಕುರಿತು ಮಾಹಿತಿ ನೀಡುವುದು?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ಸಚಿವರು):

ಅ) ಹೌದು.

ಆ) ರಾಜ್ಯದಲ್ಲಿ ಮರು ಭೂಮಾಪನ ಕಾರ್ಯ ಕೈಗೊಳ್ಳುವ ಬಗ್ಗೆ ಕ್ರಿಯಾ ಯೋಜನೆಯೊಂದನ್ನು ತಯಾರಿಸಿ, ಭೂಮಾಪನ ಇಲಾಖೆಯ ನಿರ್ದೇಶಕರು ಸರ್ಕಾರಕ್ಕೆ ಕಳುಹಿಸಿದ್ದಾರೆ. ಈ ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ, ಬೇಕಾಗುವ ಆರ್ಥಿಕ ಹಾಗೂ ಆಡಳಿತ ನೆರವಿನ ಬಗ್ಗೆ ಪರಿಶೀಲಿಸಿ, ಕೇಂದ್ರ ಸರ್ಕಾರಕ್ಕೆ ಯೋಜನೆಯನ್ನು ಸಲ್ಲಿಸಲು ಕ್ರಮ ಕೈಗೊಳ್ಳಲಾಗುವುದು.

ಇ) ಈ ಕ್ರಿಯಾ ಯೋಜನೆಯಂತೆ ರಾಜ್ಯದಲ್ಲಿನ ಎಲ್ಲಾ ತಾಲ್ಲೂಕುಗಳ ಮರು ಭೂಮಾಪನ ಮಾಡಲು 1521. 75 ಕೋಟಿ ರೂ. ಗಳ ವೆಚ್ಚ ತಗಲುವ ಸಂಭವವಿದ್ದು, ಈ ಕೆಲಸವನ್ನು ಸುಮಾರು 10 ವರ್ಷಗಳಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಗುಂಡ್ಲುಪೇಟೆಯಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ಅನುದಾನ ಬಿಡುಗಡೆ

235 (518) ಶ್ರೀ ಮಹದೇವ ಪ್ರಸಾದ್ ಹೆಚ್.ಎಸ್. (ಗುಂಡ್ಲುಪೇಟೆ) ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗುಂಡ್ಲುಪೇಟೆಯಲ್ಲಿ ನಿರ್ಮಿಸಿರುವ ಕ್ರೀಡಾಂಗಣಕ್ಕೆ ಕೇಂದ್ರ ಸರ್ಕಾರದ ಅನುದಾನ ದೊರಕಿಸಾಗಿದೆಯೇ?

ಆ) ಇಲ್ಲದಿದ್ದಲ್ಲಿ, ಈವರೆಗೂ ಕೇಂದ್ರದ ಅನುದಾನ ಬಿಡುಗಡೆಯಾಗದಿರಲು ಕಾರಣವೇನು?

ಇ) ಅನುದಾನದ ಬಿಡುಗಡೆಯಾಗಿ ಕೈಗೊಂಡಿರುವ ಕ್ರಮಗಳೇನು?